**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ರಾಜೀವ್ ಗಾಂಧಿ ವಸತಿ ನಿಗಮದ ಮುಖಾಂತರ ವಿವಿಧ ವಸತಿ ಯೋಜನೆಗಳಡಿ ನೀಡಲಾಗಿರುವ ಮನೆಗಳ ಗುರಿಗೆ ಎದುರಾಗಿ ಆಯ್ಕೆಯಾದ ಫಲಾನುಭವಿಗಳ ಹೆಸರು/ಗಂಡ/ತಂದೆಯ ಹೆಸರು ಹಾಗೂ ವಿಳಾಸವನ್ನು ನಿಗಮದ ತಂತ್ರಾಂಶದಲ್ಲಿ ನಮೂದಿಸುವ ಸಂದರ್ಭದಲ್ಲಿ ಒಂದು ವೇಳೆ ಕಣ್ತಪ್ಪಿನಿಂದಾಗಿ ಫಲಾನುಭವಿಯ ಹೆಸರು/ಗಂಡ/ತಂದೆಯ ಹೆಸರು ಹಾಗೂ ವಿಳಾಸ ತಪ್ಪಾಗಿ ನಮೂದಾಗಿದ್ದು ಅಥವಾ ಕಾಗುಣಿತ ತಪ್ಪಾಗಿದ್ದಲ್ಲಿ ಈ ತಪ್ಪನ್ನು ತಿದ್ದುಪಡಿ ಮಾಡಿಕೊಳ್ಳಲು ಗ್ರಾಮ ಪಂಚಾಯಿತಿ ಲಾಗಿನ್‌ನಲ್ಲಾಗಲೀ, ತಾಲ್ಲೂಕು ಪಂಚಾಯಿತಿ ಲಾಗಿನ್‌ನಲ್ಲಾಗಲಿ, ಜಿಲ್ಲಾ ಪಂಚಾಯಿತಿ ಆಗಿನ್‌ನಲ್ಲಾಗಲಿ ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಲಾಗಿನ್‌ನಲ್ಲಾಗಲಿ ಅವಕಾಶವಿರುವುದಿಲ್ಲವಾದ್ದರಿಂದ ಕಣ್ತಪ್ಪಿನಿಂದ ನಮೂದಾಗಿರುವ ಫಲಾನುಭವಿಗಳ ಹೆಸರುಗಳು ಹಾಗೂ ಅವರ ಆಧಾರ್ ಕಾರ್ಡ್‌ನಲ್ಲಿರುವ ವಿವರಗಳು ಹೊಂದಾಣಿಕೆಯಾಗದೆ ಮನೆ ಮಂಜೂರಾಗಿದ್ದರೂ ಅನುದಾನ ಬಿಡುಗಡೆಯಾಗದೆ ತೊಂದರೆಯಾಗುತ್ತಿರುವುದರಿಂದ ಈ ರೀತಿ ಕಣ್ತಪ್ಪಿನಿಂದ ತಪ್ಪಾಗಿ ನಮೂದಾಗಿರುವ ಫಲಾನುಭವಿಗಳ ವಿವರಗಳನ್ನು ಸರಿಪಡಿಸಿಕೊಳ್ಳಲು ನಿಗಮದಿಂದ ಅಂತಿಮ ಅನುಮೋದನೆ ಪಡೆದುಕೊಳ್ಳುವ ಮುನ್ನ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಲಾಗಿನ್‌ನಲ್ಲಿ ಸರಿಪಡಿಸಿಕೊಳ್ಳಲು ಸರ್ಕಾರ ಅವಕಾಶ ನೀಡಿ, ಬಡ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡುವುದರ ಬಗ್ಗೆ.

**ಉತ್ತರ :**

ಸರ್ಕಾರವು ವಸತಿ ರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

**ರಾಜ್ಯ ಸರ್ಕಾರದ ಯೋಜನೆಗಳು:-**

- ಬಸವ ವಸತಿ ಯೋಜನೆ
- ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಮತ್ತು ನಗರ)
- ದೇವರಾಜ್ ಅರಸು ವಸತಿ ಯೋಜನೆ (ಗ್ರಾಮೀಣ ಮತ್ತು ನಗರ)
- ವಾಜಪೇಯಿ ನಗರ ವಸತಿ ಯೋಜನೆ.

**ಕೇಂದ್ರ ಪುರಸ್ಕೃತ ಯೋಜನೆಗಳು:-**

- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಮತ್ತು ನಗರ).

ಮೇಲೆ ತಿಳಿಸಿದ ವಸತಿ ಯೋಜನೆಗಳಡಿ ಸರ್ಕಾರವು ನಿಗದಿಪಡಿಸುವ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳನ್ನು ಗ್ರಾಮ ಸಭೆ ಮುಖಾಂತರ ಆಯ್ಕೆಗೊಳಿಸಿ ತದನಂತರ ಫಲಾನುಭವಿಗಳ ವಿವರಗಳನ್ನು ಅಂದರೆ ಫಲಾನುಭವಿ ಹೆಸರು, ಗಂಡನ ಹೆಸರು, ಲಿಂಗ, ಜಾತಿ, ವಿಳಾಸ, ಆಧಾರ್ ಸಂಖ್ಯೆ ವಿವರ, ಪಡಿತರ ಚೀಟಿ ಸಂಖ್ಯೆಯ ವಿವರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಂಖ್ಯೆಯ ವಿವರ, ಗ್ರಾಮಸಭಾ ಠರಾವಿನ ಸಂಖ್ಯೆ ಹಾಗೂ ದಿನಾಂಕದ ವಿವರಗಳನ್ನು ಕೂಲಂಕಷವಾಗಿ ತಪ್ಪಿಲ್ಲದೇ ಗ್ರಾಮ ಪಂಚಾಯತಿ ಪಿಡಿಒ ಪರಿಶೀಲಿಸಿ ನಿಗಮದ

ತಂತ್ರಾಂಶದಲ್ಲಿ ನಮೂದಿಸಿ ಮುಂದಿನ ಅನುಮೋದನೆಗೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ರವಾನಿಸಲಾಗುತ್ತದೆ.

ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಆಯ್ಕೆಯಾಗಿರುವ ಫಲಾನುಭವಿಗಳ ವಿವರಗಳು ಹಾಗೂ ಗ್ರಾಮಸಭೆಯ ಠರಾವನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಗೆ ಕಳುಹಿಸಲಾಗುತ್ತದೆ. ನಂತರ ಜಿಲ್ಲಾ ಪಂಚಾಯತಿ ಮಟ್ಟದಲ್ಲೂ ಸಹ ಫಲಾನುಭವಿಗಳ ವಿವರವು ಸರಿಯಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ Digital Signature Cerification (DSC) ನೊಂದಿಗೆ ನಿಗಮಕ್ಕೆ ಸಲ್ಲಿಸಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ನಿಗಮದ ಅಂತಿಮ ಅನುಮೋದನೆ ಸಲ್ಲಿಸುವ ಮುನ್ನ ಮೇಲೆ ತಿಳಿಸಿದಂತೆ ಯಾವುದೇ ರೀತಿಯ ಕಣ್ತಪ್ಪಿನಿಂದಾದ ಅಥವಾ ಕಾಗುಣಿತ ತಪ್ಪಿನಿಂದ ಫಲಾನುಭವಿಗಳ ಹೆಸರಗಳು ತಪ್ಪಾಗಿದ್ದಲ್ಲಿ ಪ್ರಸ್ತಾವನೆಯನ್ನು ಹಿಂದಿರುಗಿಸಿ ತಿದ್ದುಪಡಿ ಮಾಡಿಕೊಳ್ಳುವ ಅವಕಾಶವನ್ನು ಈಗಾಗಲೇ ನಿಗಮವು ಆನ್ ಲೈನ್ ನಲ್ಲಿ ಕಲ್ಪಿಸಿರುತ್ತದೆ.

ಒಂದು ವೇಳೆ ಪಟ್ಟಿ ಸರಿ ಇದ್ದು, ಜಿಲ್ಲಾ ಪಂಚಾಯತಿಯಿಂದ ನಿಗಮದ ಅನುಮೋದನೆಗೆ ಬಂದಲ್ಲಿ ಅಂತಹ ಫಲಾನುಭವಿಗಳ ಪಟ್ಟಿಗೆ ನಿಗಮದಿಂದ ಅನುಮೋದನೆ ನೀಡಿ, ಜಿ.ಪಿ.ಎಸ್ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳ ಆಧಾರ್ ಸಂಖ್ಯೆಯ ಆಧಾರಿತ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಈವರೆಗೆ ಅಂದರೆ ಬಿ.ಎಲ್.ಸಿ. ಅಡಿ 2010-11 ರಿಂದ ಈವರೆಗೆ ಮಂಜೂರಾದ ಮನೆಗಳ ಆಯ್ಕೆಯಾದ ಫಲಾನುಭವಿಗಳಿಗೆ ಆರ್ಥಿಕ ವರ್ಷ 2013-14 ರಿಂದ 2021-22 ರ ಫೆಬ್ರುವರಿ-22 ರ ಅಂತ್ಯದವರೆಗೆ ರೂ.24,632.25 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಆದಾಗ್ಯೂ, ಈ ಮೇಲ್ಕಾಣಿಸಿದ ಪ್ರಕ್ರಿಯೆಯಲ್ಲಿ ಕೆಲವು ಫಲಾನುಭವಿಗಳ ಹೆಸರುಗಳು ಆಧಾರ್ ಕಾರ್ಡ್ ನಲ್ಲಿರುವ ವಿವರಗಳಿಗೆ ಹೊಂದಾಣಿಕೆಯಾಗದೇ ಅನುದಾನ ಬಿಡುಗಡೆಯಾಗದಿರುವುದು ಕಂಡುಬಂದಿರುತ್ತದೆ. ಅಂತಹ Adhar Bank Name Mismatch ಪ್ರಕರಣಗಳನ್ನು ಗ್ರಾಮ ಪಂಚಾಯತಿಗೆ ಹಿಂದಿರುಗಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಆಯ್ಕೆಯಾಗಿ ಅನುಮೋದನೆ ಪಡೆಯಲಾಗಿದ್ದ ಪಟ್ಟಿಯಲ್ಲಿನ ಫಲಾನುಭವಿಗಳ ಪೈಕಿ ಕೆಲವು ಫಲಾನುಭವಿಗಳ ಹೆಸರುಗಳು ತಪ್ಪಾಗಿದ್ದ ಕಾರಣ ತಿದ್ದುಪಡಿ ಮಾಡಿಕೊಳ್ಳಲು ಗ್ರಾಮ ಪಂಚಾಯತಿಗೆ ಅವಕಾಶ ನೀಡಿದ ಹಿನ್ನೆಲೆಯಲ್ಲಿ ಅನೇಕ ಗ್ರಾಮ ಪಂಚಾಯತಿಗಳು ಫಲಾನುಭವಿಗಳ ಹೆಸರುಗಳನ್ನೇ

ಸಂಪೂರ್ಣವಾಗಿ ಬದಲಿಸಿಕೊಂಡಿರುವುದು ಕಂಡುಬಂದಿರುವುದರಿಂದ ಗ್ರಾಮ ಪಂಚಾಯತಿ ಮಟ್ಟದಲ್ಲೇ ತಿದ್ದುಪಡಿ ಮಾಡಿಕೊಳ್ಳುವುದರ ಬದಲಿಗೆ ಆನ್ ಲೈನ್ ಮೂಲಕ ತಿದ್ದುಪಡಿ ಮಾಡಿ ಕೊಳ್ಳಲು ಕೆಳಗೆ ತಿಳಿಸಿದಂತೆ ಅವಕಾಶವನ್ನು ಕಲ್ಪಿಸಲಾಗಿದೆ.

ವಿವಿಧ ವಸತಿ ಯೋಜನೆಗಳಡಿ ಗ್ರಾಮ ಸಭೆಯಲ್ಲಿ ಆಯ್ಕೆಯಾಗಿ ಗ್ರಾಮ ಪಂಚಾಯತಿಗಳು ಆನ್ ಲೈನ್ ಮೂಲಕ ನಮೂದಿಸಲಾದ ಫಲಾನುಭವಿಗಳ ಹೆಸರು/ಗಂಡ/ತಂದೆ ಹೆಸರು ಕಣ್ತಪ್ಪಿನಿಂದ ತಪ್ಪಾಗಿ ನಮೂದಾಗಿದ್ದಲ್ಲಿ ಅಥವಾ ಕಾಗುಣಿತ ತಪ್ಪಾಗಿದ್ದಲ್ಲಿ ಈ ತಪ್ಪನ್ನು ತಿದ್ದುಪಡಿ ಮಾಡುವ ಸಲುವಾಗಿ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯತಿ ಮೂಲಕ ನಿಗಮಕ್ಕೆ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದ್ದು, ಅದರಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ Digital Signature Cerification (DSC) ಅನುಮೋದನೆಯೊಂದಿಗೆ ಆನ್ ಲೈನ್ ಮೂಲಕ ಸಲ್ಲಿಕೆಯಾಗುವ ಪ್ರಸ್ತಾವನೆಯನ್ನು ಅನುಮೋದಿಸಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಆದಕಾರಣ ಆಯ್ಕೆಯಾದ ಫಲಾನುಭವಿಗಳ ಹೆಸರುಗಳನ್ನು ತಿದ್ದುಪಡಿ ಮಾಡಿ ಕೊಳ್ಳುವಲ್ಲಿ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

(ಸಂಖ್ಯೆ : ವಇ 218 ಹೆಚ್‌ಎಎಂ 2022)

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು